ಪೈಜಾಮಗಳನ್ನು ತೊಡುತ್ತಿದ್ದಳು. ಬೇಸಿಗೆಯ ದಿನಗಳಲ್ಲಿ ತಲೆಯ ಮೇಲೆ ಫ್ಯಾನ್ ತಿರುಗುತ್ತಿದ್ದರೂ ಅವಳು ಯಾವಾಗಲೂ ತೆಳ್ಳಗಿನ ಶಾಲೊಂದನ್ನು ಹೊದ್ದುಕೊಂಡೇ ಇರುತ್ತಿದ್ದಳು.

ಅವಳಿಗೆ ಚಳಿಗಾಲವೆಂದರೆ ಬಹು ಇಷ್ಟ. ನನಗೂ ಆ ದಿನಗಳಲ್ಲಿ ಅವಳ ಮನೆಯಲ್ಲಿರುವುದೆಂದರೆ ಬಹಳ ಇಷ್ಟ. ಅವಳು ಹೊರಗೆ ಹೋಗುವುದು ಕಡಿಮೆಯೇ. ನೆಲದ ಹಾಸಿನ ಮೇಲೆ ಒರಗಿಕೊಂಡು ಒಣಹಣ್ಣುಗಳನ್ನು ತಿನ್ನುತ್ತಿದ್ದವಳ ಬೆನ್ನನ್ನು ರಬ್ಬು ತಿಕ್ಕುತ್ತಿರುತ್ತಿದ್ದಳು. ಉಳಿದ ಕೆಲಸದವರಿಗೆ ರಬ್ಬುವನ್ನು ಕಂಡರೆ ಅಸೂಯೆಯಾಗುತ್ತಿತ್ತು. ಮಾಟಗಾತಿ! ಅವಳು ತಿನ್ನುವುದು ಕೂರುವುದು ಮಲಗುವುದು ಕೂಡ ಬೇಗಮ್ ಜಾನ್‌ಳೊಂದಿಗೆ! ರಬ್ಬು ಮತ್ತು ಬೇಗಂ ಜಾನ್ ಬಿಡುವಿನ ಸಮಯದಲ್ಲಿ ಅವರ ಕಾಡುಹರಟೆಯ ವಸ್ತುವಾಗಿರುತ್ತಿದ್ದರು. ಯಾರಾದರೊಬ್ಬರು ಅವರ ಹೆಸರನ್ನು ತೆಗೆದೊಡನೆ ಇಡಿಯ ಗುಂಪು ಗೊಳ್ಳೆಂದು ನಗುತ್ತಿತ್ತು. ಅವರ ಬಗ್ಗೆ ರಸಭರಿತ ಕಥೆಗಳನ್ನು ಸೃಷ್ಟಿಸುತ್ತಿದ್ದರು. ಹೊರಗಿನ ಪ್ರಪಂಚದಿಂದ ದೂರವೇ ಉಳಿದ ಬೇಗಮ್ ಜಾನ್‌ಳಿಗೆ ಇದ್ಯಾವುದರ ಚಿಂತೆಯೇ ಇರಲಿಲ್ಲ. ಅವಳ ಜೀವನವಿದ್ದದ್ದು ತಾನು ಮತ್ತು ತನ್ನ ತುರಿಕೆಯ ಸುತ್ತ.

ನಾನು ಮೊದಲೇ ಹೇಳಿದಂತೆ ಆಗ ನಾನು ಬಹಳೇ ಚಿಕ್ಕವಳಿದ್ದೆ ಮತ್ತು ಬೇಗಮ್ ಜಾನ್ ಎಂದರೆ ತುಂಬ ಪ್ರೀತಿಯನ್ನಿಟ್ಟುಕೊಂಡಿದ್ದೆ. ಅವಳಿಗೂ ನಾನೆಂದರೆ ಬಹಳ ಇಷ್ಟ. ನನ್ನಮ್ಮ ಆಗ್ರಾಕ್ಕೆ ಹೋಗುವ ನಿಶ್ಚಯ ಮಾಡಿದಾಗ ಒಂದು ವಾರದ ಮಟ್ಟಿಗೆ ನನ್ನನ್ನು ಬೇಗಮ್ ಜಾನ್‌ಳ ಹತ್ತಿರ ಬಿಟ್ಟಿದ್ದಳು. ನನ್ನೊಬ್ಬಳನ್ನೇ ಊರಿನಲ್ಲಿ ಬಿಟ್ಟರೆ ಒಂದೋ, ನಾನು ಅಣ್ಣಂದಿರೊಂದಿಗೆ ಜಗಳವಾಡುವವಳು ಅಥವಾ ಊರೆಲ್ಲ ಅಡ್ಡಾಡುವವಳು ಎಂದು ಗೊತ್ತೇ ಇತ್ತು. ಈ ವ್ಯವಸ್ಥೆ ಬೇಗಮ್ ಜಾನ್ ಮತ್ತು ನನಗೆ ಬಹಳ ಇಷ್ಟವಾಗಿತ್ತು. ಅವಳು ಅಮ್ಮನ ದತ್ತು ತಂಗಿಯಲ್ಲವೇ? ಈಗ ಎದ್ದದ್ದು ನಾನು ಮಲಗುವುದೆಲ್ಲಿ? ಎನ್ನುವ ಪ್ರಶ್ನೆ. ಸಹಜವಾಗಿಯೇ ಬೇಗಮ್ ಜಾನ್‌ಳ ಕೋಣೆಯಲ್ಲಿ ಎಂದಾಯಿತು. ಅವಳ ಹಾಸಿಗೆಯ ಪಕ್ಕ ಚಿಕ್ಕ ಹಾಸಿಗೆಯನ್ನು ಹಾಸಲಾಯಿತು. ರಾತ್ರಿ ಹತ್ತು ಹನ್ನೊಂದರವರೆಗೆ ನಾವು ಹರಟೆ ಹೊಡೆಯುತ್ತ "ಚಾನ್ಸ್" ಆಡುತ್ತಿದ್ದೆವು. ಆಮೇಲೆ ನಾನು ಮಲಗುತ್ತಿದ್ದೆ. ನಾನು ನಿದ್ದೆಗೆ ಜಾರುವಾಗಲೂ ರಬ್ಬು ಅವಳ ಬೆನ್ನು ತಿಕ್ಕುತ್ತಲೇ ಇರುತ್ತಿದ್ದಳು. ಗಲೀಜು ಹೆಂಗಸು ಎಂದು ಮನದಲ್ಲೇ ಅಂದುಕೊಳ್ಳುತ್ತಿದ್ದೆ.

ರಾತ್ರಿ ಎಚ್ಚರವಾದಾಗ ಯಾಕೋ ಭಯವಾಯಿತು. ಕಗ್ಗತ್ತಲಿನಲ್ಲಿ ಬೇಗಮ್ ಜಾನ್‌ಳ ರಜಾಯಿ ಆನೆಯೊಂದು ಜೋರಾಗಿ ಒಳಗಡೆ ಮಿಸುಕಾಡಿದಂತೆ ಅಲುಗಾಡುತ್ತಿತ್ತು.

"ಬೇಗಮ್ ಜಾನ್..." ಹೆದರಿಕೆಯಿಂದ ನನಗೆ ಮಾತುಗಳೇ ಹೊರಡುತ್ತಿರಲಿಲ್ಲ. ಆನೆ ಅಲುಗಾಡುವುದು ನಿಂತು ರಜಾಯಿ ಪುಸ್ ಆಯ್ತು.

"ಏನಾಯಿತು? ನಿದ್ದೆ ಮಾಡು" ಬೇಗಮ್ ಜಾನ್‌ಳ ಸ್ವರ ಎಲ್ಲಿಂದಲೋ ಬಂದಂತಿತ್ತು.

"ನನಗೆ ಭಯವಾಗುತ್ತಿದೆ" ನಾನು ಅಳುಬುರುಕ ಧ್ವನಿಯಲ್ಲಿ ಹೇಳಿದೆ.

"ಮಲ್ಕೋ, ಏನಿದೆ ಹೆದರಲು? ಅಯಾತುಲ್ ಕುರ್ಸಿ ಹೇಳಿಕೊ."

"ಸರಿ..." ನಾನು ಪ್ರಾರ್ಥನೆ ಮಾಡತೊಡಗಿದೆ. ಇಡೀ ಆಯಾತ್ ನನಗೆ ಕಂಠಪಾಠವಾಗಿದ್ದರೂ ಪ್ರತಿ ಸಾರಿ ನಾನು, "ಯಾ ಲಮು ಮಾ ಬೈನ್" ತಲುಪುತ್ತಲೇ ಉಳಿದ ಸಾಲುಗಳು ನನಗೆ ಮರೆತೇ ಹೋಗುತ್ತಿದ್ದವು.

"ಬೇಗಮ್ ಜಾನ್ ನಾನು ನಿಮ್ಹತ್ರ ಬರ್ಲಾ?"

"ಬೇಡ ಪುಟ್ಟಿ... ಮಲ್ಕೋ" ಚುಟುಕಾಗಿ ಉತ್ತರ ಬಂದಿತು. ಆಮೇಲೆ ನನಗೆ ಇಬ್ಬರ ಪಿಸುಗುಟ್ಟುವಿಕೆ ಕೇಳಿಸಿತು. ಅಯ್ಯೋ ದೇವರೆ, ಇನ್ನೊಬ್ಬರು ಯಾರು? ನನಗೆ ನಿಜಕ್ಕೂ ಭಯವಾಯಿತು.

"ಬೇಗಮ್ ಜಾನ್... ಕೋಣೆಯೊಳಗೆ ಕಳ್ಳ ಬಂದಂತಿದೆ."

"ಮಲ್ಕೋ ಪುಟ್ಟಿ... ಯಾವ ಕಳ್ಳನೂ ಇಲ್ಲ."

ಇದು ರಬ್ಬುನ ದನಿ. ನಾನು ಮುಖದ ಮೇಲೆ ರಜಾಯಿ ಹೊದ್ದುಕೊಂಡು ನಿದ್ದೆಗೆ ಜಾರಿದೆ.

ಬೆಳಗ್ಗೆ ಏಳುವಾಗ ನನಗೆ ರಾತ್ರಿ ನಡೆದ ಭಯಾನಕ ಅಂಕ ಮರೆತೇ ಹೋಗಿತ್ತು. ಮೊದಲಿನಿಂದಲೂ ನಾನು ಮೂಢನಂಬಿಕೆಯವಳು. ನನ್ನ ಬಾಲ್ಯದಲ್ಲಿ, ಕತ್ತಲೆಯ